subsequent paras. This is what they say :

"The most important recommendation in this category that we would make is the creation of a Special Officer for Efficiency Audit and Anti-corruption Measures."

It is not only a question of its being conducive to efficient working but it is a measure of economy also not to have too many officers for these very purposes which so often are dovetailed to one another. The overlap so often. Therefore I think it is very desirable that there should be—whether it is a question of commission or one officer—one officer, which would be very helpful. So I think that following up this recommendation Government have been pleased to appoint one Special Officer for both these purposes. I think, bifurcation would mean, apart from doubtful increase of efficiency, certainly additional cost.

As regards the Commission, I think I am inclined to agree with the Hon'ble Member Sri A. G. Ramachandra Rao that it must be vested with more powers almost of a decisive character. We are also contemplating the constitution of a Public Service Commission and its scope, extent, and the nature of work is to be seen. I think another Commission of this nature to go into only anti-corruption matters is not called for, at any rate at this stage and I need not say to the Hon'ble Members that it means certainly a great deal more of expenditure. My own fear is that if you have a Commission it will also entail considerable delay in the disposal of the cases. For these reasons I request the Hon'ble Member not to press the resolution at this moment. Let us await the progress that is being made now. If he sees the recommendation he will find the powers are very wide; for instance, there are things like this :

Government should compel Public Servants to furnish all relevant information with regard to their property such as bank accounts, shares and other investments, insurance policies, immovable property held or acquired by them or transferred by them to their dependants or others on pain of dismissal. These returns should be half-yearly in prescribed forms."

and so on. I think if the work of the present Special Officer is going to be implemented in the manner indicated in this report much of the criticism will be obviated and we will be really making him a very effective instrument of maintaining efficiency and getting rid of corruption in the State. So I request the Hon'ble Member not to press the resolution.

Sri A. G. RAMACHANDRA RAO.— In the circumstances explained by the Hon'ble Minister I beg leave of the House to withdraw the resolution.

The resolution was, by leave of the House, withdrawn.

Mr. SPEAKER. - Next Resolution. Sri D. M. Siddiah.

Kannada to be the Medium of Instruction in the University.

ಶ್ರೀ ಡಿ. ಎಂ. ಸಿದ್ಧಯ್ಯನವರು.—ಮಾನ್ಯ ಅಧ್ಯಕ್ಷರೇ, ನನ್ನ ನಿರ್ಣಯ ಈ ರೀತಿಯಿದೆ :—

"ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡವು ಶಿಕ್ಷಣ ಮಾಧ್ಯಮವಾಗಿರಬೇಕೆಂಬುದಾಗಿ ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಸ್ವಾಮಿ, ಈ ನಿರ್ಣಯ ಎಷ್ಟು ಪ್ರಾಮುಖ್ಯವಾದ್ದೆಂಬದನ್ನು ಈ ಸಭೆಯ ಗಮನಕ್ಕೆ ತರಬೇಕಾದ್ದು ಅನಗತ್ಯ. ಎಲ್ಲರಿಗೂ ಈ ನಿರ್ಣಯದ ಮಹತ್ವ ತಿಳಿದೇ ಇದೆ. ಒಂದು ಮಾತಿನಲ್ಲಿ ಹೇಳುವುದಾದರೆ, ಮನುಷ್ಯನಿಗೆ ಅತ್ಯವಶ್ಯಕವಾಗಿ ಬೇಕಾದ ಅನ್ನಬಟ್ಟೆಗಳ ಜೊತೆಗೆ ಅವನಿಗೆ ತನ್ನ ಭಾಷೆಯಲ್ಲಿ ತಾನು ವಿದ್ಯೆ ಕಲಯುವ ಸ್ವಾತಂತ್ರ್ಯವಿರುವುದೂ ಆತ್ಯಗತ್ಯ. ನಮ್ಮ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಹೋರಾಟ ಪ್ರಾರಂಭವಾಗುವುದಕ್ಕೆ ಮುಂಚೆಯೇ ಈ ಕನ್ನಡದ ಚಳವಳಿಯು ಪ್ರಾರಂಭವಾಯಿತು. ಅದರ ಪರಿಣಾಮವಾಗಿ ಮಾಧ್ಯಮಿಕ ಮತ್ತು ಹೈಸ್ಕೂಲುಗಳಲ್ಲಿ ಕನ್ನಡವು ಬೋಧಕ ಭಾಷೆಯಾಗಿ ಜಾರಿಗೆ ಬಂತು. ಆದರೆ ಅಲ್ಲಿ ಸಂಪೂರ್ಣವಾಗಿ ಪ್ರಾರಂಭಿಸದೆ ಇನ್ನೂ ಸ್ವಲ್ಪಮಟ್ಟಿಗೆ ಇಂಗ್ಲಿಷ್ ಭಾಷೆಯನ್ನು ಇಟ್ಟದ್ದರಿಂದ ತೊಡಕಿಗೆ ಕಾರಣವಾಯಿತು. ಆಗಲೇ ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು ಮಾಧ್ಯಮಿಕ ಭಾಷೆಯಾಗಿ ಮಾಡದೆ ಇಂದು ನಾವು ಇಷ್ಟೊಂದು ದುಸ್ಥಿತಿಗೆ ಬಂದಿದ್ದೇವೆಂದು ಹೇಳಿದರೆ ನಿಜವಾಗಿಯೂ ಕನ್ನಡಿಗರಾದ ನಾವು ತಲೆತಗ್ಗಿಸಬೇಕಾಗಿ ಬಂದಿದೆ. ನಮ್ಮ ಮಕ್ಕಳು ಮಿಡ್ಲ್ ಸ್ಕೂಲು ಮತ್ತು ಹೈಸ್ಕೂಲಿನಲ್ಲಿ ಕನ್ನಡದಲ್ಲಿ ವಿದ್ಯಾಭ್ಯಾಸ ಮಾಡಿ ಈಗ ವಿಶ್ವವಿದ್ಯಾನಿಲಯಕ್ಕೆ ಬಂದ ತಕ್ಷಣ ಇಂಗ್ಲೀಷಿನಲ್ಲಿ ಕಲಯುವುದಕ್ಕೆ ಪ್ರಾರಂಭ ಮಾಡಬೇಕಾಗಿದೆ. ಇದು ಬಹಳ ಕೊಡಕಿನ ಸಮಸ್ಯೆ. ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ಯಾವ ವಿಶ್ವವಿದ್ಯಾನಿಲಯದಲ್ಲಿ ಒಂದು ಪ್ರೌಢ ಶಿಕ್ಷಣವನ್ನು ಸೋಷಿಯಲ್ ಸೈನ್ಸ್ ಮತ್ತು ವೈಜ್ಞಾನಿಕ ಹಾಗೂ ರಾಜಕೀಯ ಶಾಸ್ತ್ರ

(ಶ್ರೀ ಡಿ. ಯಂ. ಸಿದ್ದಯ್ಯನವರು).

ಗಳನ್ನು ಮತ್ತು ಇನ್ನೂ ಅನೇಕ ಮನುಷ್ಯನ ಜೀವನಕ್ಕೆ ಬೇಕಾದ ವಿದ್ಯೆಗಳಲ್ಲಿ ಪ್ರವೀಣತೆಯನ್ನು ಹೆಚ್ಚಿಸುವಂತೆ ಮಾಡಬೇಕಾದರೆ ಇಂಗ್ಲೀಷನ್ನು ಮುಖ್ಯ ಭಾಷೆಯಾಗಿ ಟ್ಟುಕೊಳ್ಳುವುದು ಯಾವ ನ್ಯಾಯ? ಮನುಷ್ಯನಿಗೆ ರಾಜಕೀಯ ಸ್ವಾತಂತ್ರ್ಯ ಎಷ್ಟು ಮುಖ್ಯವೋ ಅಷ್ಟೇ ಮಟ್ಟಿಗೆ ತನ್ನ ಭಾಷೆಯಲ್ಲಿ ವಿದ್ಯೆ ಕಲಿಯುವ ಸ್ವಾತಂತ್ರ್ಯವೂ ಮುಖ್ಯ. ಕೇಂದ್ರ ಸರ್ಕಾರದ ವಿದ್ಯಾಮಂತ್ರಿಗಳಾದ ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರವರು ಇನ್ನು 15 ವರ್ಷಗಳಲ್ಲಿ ಇಂಗ್ಲೀಷು ನಮ್ಮ ಸರ್ಕಾರಿ ವ್ಯವಹಾರ ಮತ್ತು ಮಾಧ್ಯಮ ಮುಂತಾದುವುಗಳಲ್ಲೆಲ್ಲಾ ಹೋಗಬೇಕಾಗಿದೆಯೆಂದು ಹೇಳಿದ್ದಾರೆ. ಈಗ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲೀಷು ಮುಖ್ಯ ಭಾಷೆಯಾಗಿದೆ. ಅವರು ಹೇಳಿದಂತೆ ಇನ್ನು 15 ವರ್ಷಗಳಲ್ಲಿ ಇಂಗ್ಲೀಷು ಹೋಗಬೇಕಾದರೆ ಅದಕ್ಕೆ ಈಗಿನಿಂದಲೇ ಸಿದ್ಧತೆಗಳಾಗಲೇಬೇಕು. ಹೀಗಿರುವಾಗ ಸರ್ಕಾರದವರೇನು ಮಾಡುತ್ತಿದ್ದಾರೋ ಕಾಣೆ. ವಿಶ್ವವಿದ್ಯಾನಿಲಯದ ಸೆನೆಟ್‌ನಲ್ಲಿ, ಪರಿಷತ್ತುಗಳಲ್ಲಿ, ಈ ಸಭೆಗಳಲ್ಲಿ ಕನ್ನಡವನ್ನು ಬೋಧಕಭಾಷೆಯನ್ನಾಗಿ ಮಾಡಬೇಕೆಂದು ಎಷ್ಟೋ ನಿರ್ಣಯಗಳಾಗಿವೆ. ಅವೆಲ್ಲಾ ದಕ್ಕೂ ಸರ್ಕಾರದವರು ನಿಗಾ ಕೊಟ್ಟಹಾಗೆ ಕಾಣುವುದಿಲ್ಲ. ಇದರ ಮಟ್ಟಿಗೆ ಯಾವ ಹೆಚ್ಚಿನ ಶ್ರದ್ಧೆಯನ್ನೂ ಅವರು ವಹಿಸಿರುವಂತೆ ತೋರುವುದಿಲ್ಲ. ಅದೇನು ನಮ್ಮ ದೌರ್ಭಾಗ್ಯವೋ ಅನ್ನುವಂತೆ ಹಿಂದಿದ್ದ ಪದ್ಧತಿಯನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ತಾವೀಗ ವಿಶ್ವವಿದಾ ನಿಲಯದಲ್ಲಿ ಬಹಳ ಜಾಗ್ರತೆ ಕನ್ನಡ ಮಾಧ್ಯಮವನ್ನು ಜಾರಿಗೆ ತರುವುದು ಅತ್ಯಾವಶ್ಯಕವಾಗಿದೆ. ಇದಕ್ಕೆ ಕೆಲವು ತೊಂದರೆಗಳಿವೆಯೆಂದು ಅಭಿಪ್ರಾಯಪಡಬಹುದು. ಪಠ್ಯಪುಸ್ತಕಗಳಿಲ್ಲ, ಪಾಠ ಹೇಳಿಕೆಗಾರರಿಲ್ಲವರಿಗೆ ತೊಂದರೆಯಾಗುತ್ತದೆ ಎಂದು ಮುಂತಾಗಿ ಹೇಳಬಹುದು. ಇದು ಅಷ್ಟಾಗಿ ಹೆಚ್ಚಿನ ಕಷ್ಟವಲ್ಲ. ವಿಶ್ವವಿದ್ಯಾನಿಲಯದಲ್ಲಿ ಅನೇಕ ಪ್ರಾಜ್ಞರಿದ್ದಾರೆ, ಪ್ರವೀಣತೆ ಪಡೆದವರಿದ್ದಾರೆ, ಅನೇಕ ವಿಷಯಗಳಲ್ಲಿ ಒಳ್ಳೆಯ ತಿಳಿವಳಿಕೆ ಪಡೆದವರಿದ್ದಾರೆ. ನೀವಿದನ್ನು ಕೈಕೊಂಡು ಅವರಿಗೆ ಸಾಕಷ್ಟು ಪುರಸ್ಕಾರ ಕೊಟ್ಟರೆ ಉತ್ತಮ ಗ್ರಂಥಗಳನ್ನು ಬರೆಯಲು ಸಿದ್ಧರಾಗಿದ್ದಾರೆ. ಅವರು ಚೆನ್ನಾಗಿಯೂ ಬರೆಯಬಲ್ಲರು. ಪಾಠ ಹೇಳಿಕೊಡುವುದರಲ್ಲೂ ಪರಭಾಷೆಯಲ್ಲಿ ಪಾಠ ಹೇಳುವ ಜನಕ್ಕೆ ಸ್ವಭಾಷೆಯಲ್ಲಿ ಪಾಠ ಹೇಳುವುದು ಕಷ್ಟವೆಂದರೆ ನನಗರ್ಥವಾಗುವುದಿಲ್ಲ. ಅದರಲ್ಲೂ ಈಚೆಗೆ ನಮ್ಮ ವಿಶ್ವವಿದ್ಯಾನಿಲಯಕ್ಕೆ University extension lectures ಕೊಡುವುದನ್ನೂ ಕೂಡ ನಿಲ್ಲಿಸಿದ್ದಾರೆಂಬದನ್ನು ಕೇಳಿದರೆ ಬಹಳ ವಿಷಾದ ವಾಗುತ್ತದೆ.

ಈ ದೃಷ್ಟಿಯಿಂದಲೂ ವಿದ್ಯಾಭ್ಯಾಸಕ್ಕೆ ಸರ್ಕಾರದವರು ಯಾವ ಒಂದು ನಿರ್ದಿಷ್ಟವಾದ ರೀತಿಯಲ್ಲಿ ಅನುಕೂಲಪಡಿಸದಿರುವುದನ್ನು ನೋಡಿದರೆ ಅವರಿಗೆ ಇದರಲ್ಲಿ ಎಷ್ಟು ತಾತ್ಸಾರ ಮನೋಭಾವವಿರುತ್ತೆಂಬುದು ಎದ್ದು ಕಾಣುತ್ತದೆ. ಆದರೆ ಇದು ದೇಶದ ಪ್ರಗತಿಗೆ ಉತ್ತಮವಾದ ನೀತಿಯಲ್ಲ, ಇದನ್ನು ತಾವು ಬೇಗ ಬದಲಾವಣೆ ಮಾಡಬೇಕು, ಸಂಸ್ಥಾನಾಮಳೆಯಿರತಕ್ಕ ಪ್ರತಿಯೊಂದು ಪಾಠಶಾಲೆಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಮಾಧ್ಯಮವಿದ್ದು, ಪ್ರತಿಯೊಂದು ಪಾಠವನ್ನೂ ಕನ್ನಡದಲ್ಲೇ ಬೋಧೆ ಮಾಡುವಂತೆ ಮಾಡತಕ್ಕದ್ದು ಬಹು ಮುಖ್ಯವಾದದ್ದು. ಆದರೆ ಈ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಉತ್ತರ ಹೇಳಬಹುದು. ಅದೇನೆಂದರೆ—ಈ ವಿಷಯ ನಮ್ಮ ಕೈಲಲ್ಲ; ಇಂಟರ್ ಯೂನಿವರ್ಸಿಟಿ ಬೋರ್ಡಿನವರು ಈ ಬಗ್ಗೆ ಒಂದು ತೀರ್ಮಾನಕ್ಕೆ ಬಂದಮೇಲೆ ಈ ವಿಚಾರವನ್ನು ನಮ್ಮ ಆಲೋಚನೆಗೆ ತೆಗೆದುಕೊಳ್ಳಲಾಗುತ್ತದೆ ಎಂದು. ಆದರೆ ಆ ಇಂಟರ್ ಯೂನಿವರ್ಸಿಟಿ ಬೋರ್ಡಿನವರು ಇಲ್ಲಿಯತನಕ ಯಾವ ಒಂದು ತೀರ್ಮಾನಕ್ಕೂ ಬಂದಿರುವುದಿಲ್ಲ. ಹಾಗೆ ಆ ಬೋರ್ಡಿನವರು ವರ್ತಿಸುತ್ತಿರುವುದರಿಂದು ಅವರಿಗೆ ಇದರ ಮೇಲೆ ಅಷ್ಟಾರಮಟ್ಟಿನ ಪ್ರೀತಿ ವಿಶ್ವಾಸಗಳಿರುತ್ತವೆಂಬುದಾಗಲಿ, ಅಥವಾ ಅವರಿಂದ ನಮಗೆ ಒಂದು ಉಪಕಾರ ಆಗುತ್ತೆಂದು ಹೇಳುವುದಾಗಲಿ, ಅದು ಪೂರಾ ನಂಶಯಾಸ್ಪದವಾದ ವಿಷಯ. ನಮ್ಮ ವಿಶ್ವವಿದ್ಯಾನಿಲಯದಲ್ಲಿಯೇ ಈ ದಿವಸ ಕನ್ನಡದಲ್ಲಿ ಪಾರಂಗತರಾಗಿರತಕ್ಕವರಿಂದ ಆ ಕೆಲಸ ನಡೆಯುತ್ತಿದ್ದರೆ ಅದು ಏತಕ್ಕಾಗಬಾರದು? ಹೀಗೆ ಅನುಕೂಲವಿರತಕ್ಕ ಸನ್ನಿವೇಶಗಳನ್ನು ಬಿಟ್ಟು, ಹೀಗೆ ಬೇರೆ ಏತಕ್ಕೆ ಇನ್ನೊಬ್ಬರಿಗೆ ಇದನ್ನು ಒಪ್ಪಿಸಬೇಕು? ಹೀಗೆ ಇಲ್ಲದ ತೊಡಕುಗಳನ್ನು ಏಕೆ ಕಲ್ಪಿಸಬೇಕು? ಒಟ್ಟಿನಲ್ಲಿ ನಾನು ಹೇಳುವುದು ವಿಶ್ವವಿದ್ಯಾನಿಲಯದಲ್ಲಿ ವಿಶಿಷ್ಟ ಶಿಕ್ಷಣವನ್ನೂ ಕನ್ನಡ ಮಾಧ್ಯಮದಲ್ಲೇ ವಿದ್ಯಾರ್ಥಿಗಳಿಗೆ ಬೋಧಿಸುವಂತೆ ಮಾಡಿ ಈಗಿರುವ ತೊಂದರೆಗಳನ್ನೆಲ್ಲಾ ತಪ್ಪಿಸುತ್ತೀರೆಂದು ನಾನು ನಂಬಿದ್ದೇನೆ. ಈಗ ಇರತಕ್ಕ ಮುಖ್ಯ ತೊಂದರೆ ಏನೆಂದರೆ ಈ ಭಾಷೆಯನ್ನು ಕಲಿಯುವುದಕ್ಕೆ ಹುಡುಗರ ಕಾಲವೆಲ್ಲವೂ ವಿನಿಯೋಗವಾಗುತ್ತಿದೆ. ಆದರೂ ಬಹಳ ಕಷ್ಟ. ಇದು ನಮ್ಮ ದೇಶದ ದೌರ್ಭಾಗ್ಯ. ಆದರೆ ಆಂಗ್ಲೇಯ ಭಾಷೆಯಲ್ಲಿ ಪ್ರೊಫಿಷಿಯರ್ಸಿ ಪಡೆದ ಮೇಲೆ ಅಂದರೆ ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ಕಲಿತುಕೊಂಡಮೇಲೆ ಆ ಪ್ರಾವೀಣ್ಯತೆಗೆ ಪ್ರಯತ್ನಪಡತಕ್ಕದ್ದು ಸಹಜವಾದ್ದು. ಆದರೆ ನಮ್ಮ ಕನ್ನಡ ಭಾಷೆಯಲ್ಲೇ ಆ ವಿಚಾರಗಳನ್ನೆಲ್ಲಾ ತಿಳಿದುಕೊಳ್ಳುವಷ್ಟು ಸುಲಭವಾಗಿ ಈ ಭಾಷೆಯಿಂದ ತಿಳಿಯುವುದು ಬಹಳ ಕಷ್ಟ. ಆದುದರಿಂದ ಸರ್ಕಾರದವರು ಕನ್ನಡದಲ್ಲೇ ಎಲ್ಲಾ ಪಠ್ಯಪುಸ್ತಕಗಳನ್ನು ಮತ್ತು ಶಿಕ್ಷಣವನ್ನು ಸಹ ವಿಶ್ವವಿದ್ಯಾನಿಲಯದಿಂದ ಹಿಡಿದು, ಪ್ರತಿಯೊಂದು ಶಾಖೆಯಲ್ಲೂ ಸಂಪೂರ್ಣವಾಗಿ ಜಾರಿಗೆ ತಂದರೆ ಇದರಿಂದ ತುಂಬಾ ಸಹಾಯವಾಗುತ್ತದೆಂದೂ, ಆದ್ದರಿಂದ ಸರ್ಕಾರದವರು ಕೂಡಲೇ ಇದನ್ನು ಕಾರ್ಯರೂಪಕ್ಕೆ ತರಬೇಕೆಂದೂ ತಿಳಿಸಿ, ಹಾಗೆ ಇದನ್ನು ಇನ್ನೂ ಮಾಡದಕ್ಕಾಬಿಟ್ಟಿರುವುದರಿಂದ, ನಾನು ಈ ನಿರ್ಣಯವನ್ನು ಈಗ ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—Resolution moved :—

"ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡವು ಶಿಕ್ಷಣದ ಮಾಧ್ಯಮವಾಗಿರಬೇಕೆಂಬುದಾಗಿ ಈ ಸಭೆಯವರು ಅಭಿಪ್ರಾಯಪಡುತ್ತಾರೆ".

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು (ಚಿತ್ರದುರ್ಗ–ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಬಂದಿರತಕ್ಕ ನಿರ್ಣಯವು ಹೊಸದೇನೂ ಅಲ್ಲ. ಹಿಂದಿನ ಶಾಸನ ಸಭೆಗಳಲ್ಲಿ ಇದು ಅನೇಕ ವೇಳೆ ಚರ್ಚೆಯಾಗಿರುತ್ತೆ. ನಮ್ಮ ಸಂಸ್ಥಾನಕ್ಕೆ ಕನ್ನಡವು ಪ್ರಾದೇಶಿಕ ಭಾಷೆಯಾಗಿರುವುದೆಂಬುದನ್ನು ಒಪ್ಪಿರುತ್ತೇವೆ. ಕನ್ನಡ ಭಾಷೆಯು ಶಿಕ್ಷಣ ಮಾಧ್ಯಮವಾಗಿರಬೇಕೆಂಬುದನ್ನೂ ಕೂಡ ನಾವು ಅಂಗೀಕರಿಸಿ ನಮ್ಮ ಶಾಲೆಗಳಲ್ಲಿ ಜಾರಿಗೆ ತಂದಿರುತ್ತೇವೆ. ಈಗಾಗಲೇ ಕನ್ನಡ ಮಾಧ್ಯಮದಲ್ಲಿಯೇ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ

ಶಿಕ್ಷಣವನ್ನು ಕೊಡುತ್ತಿದ್ದೇವೆ. ಈಗ ಬಂದಿರತಕ್ಕ ವಿಷಯ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮವನ್ನು ಏರ್ಪಡಿಸತಕ್ಕದ್ದಕ್ಕೆ ಮಾತ್ರ ಸಂಬಂಧಿಸಿದೆ. ಶಿಕ್ಷಣವನ್ನು ಆಯಾಯ ಪ್ರದೇಶಿಕ ಭಾಷೆಯಲ್ಲಿ ಕೊಟ್ಟರೆ ವಿಷಯ ಪರಿಚಯವನ್ನು ಚೆನ್ನಾಗಿಯೂ, ಶೀಘ್ರವಾಗಿಯೂ ಪಡೆದುಕೊಳ್ಳಲು ಅವಕಾಶವಿರುತ್ತದೆ. ಈ ರೀತಿ ಮಾಡದೆ ಜನರಿಗೆ ಪರಿಚಯವಿಲ್ಲದ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿಟ್ಟರೆ ಅಂತಹ ಭಾಷೆಯನ್ನು ಕಲಿಯುವುದರಲ್ಲಿಯೇ ಕಾಲವೆಲ್ಲ ಕಳೆದು ಹೋಗುತ್ತದೆಂಬುದು ಎಲ್ಲರೂ ಒಪ್ಪತಕ್ಕ ವಿಷಯ. ಇದೇ ವಿಚಾರವನ್ನು ಪರಿಶೀಲಿಸಲು ಇಂಡಿಯಾ ಸರ್ಕಾರದವರು, ವಿಶ್ವವಿದ್ಯಾನಿಲಯಗಳ ಸ್ಥಾನಪತಿಗಳನ್ನೂ ಮತ್ತು ಇತರ ಪ್ರಮುಖರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಿದ್ದರು. ಆ ಸಮಿತಿಯವರು ತಮ್ಮ ವರದಿಯನ್ನು ಕಳುಹಿಸಿರುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಇರತಕ್ಕ ಆಕ್ಟಿನಲ್ಲಿ ಈ ಇಂಗ್ಲಿಷ್ ಇರಲೇ ಕೂಡದೆಂದು ಹೇಳಿದೆಯೇ ?

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಅಲ್ಲಿ ಏನಾದರೂ ಹೇಳಿರಲಿ, ಈಗ ಬಂದಿರುವ ಪ್ರಶ್ನೆ ಕನ್ನಡ ಮಾಧ್ಯಮದ ವಿಷಯ. ಮಾಧ್ಯಮ ಸಮಿತಿಯವರು ತಮ್ಮ ವರದಿಯಲ್ಲಿ ಹೀಗೆ ಹೇಳುತ್ತಾರೆ:

" Opinion was unanimous that a time must come when English should be replaced by an Indian language as the medium of instruction at the higher stages of Education. The main difficulties in giving effect to this proposal were (i) lack of suitable text books especially on scientific subjects and (ii) lack of technical terms in the Indian languages. "

ಮೊದಲನೆಯ ವಿಷಯವಾಗಿ ಸಮಿತಿಯವರು ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಾ, ಇಂಡಿಯಾ ದೇಶದ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳೂ ವಿಶ್ವವಿದ್ಯಾನಿಲಯಗಳೂ, ಇತರ ಖಾಸಗೀ ಸಂಸ್ಥೆಗಳೂ ಪ್ರಯತ್ನಿಸಿ, ಮೂರರಿಂದ ಐದು ವರ್ಷಗಳೊಳಗಾಗಿರತಕ್ಕ ಪಠ್ಯ ಪುಸ್ತಕಗಳನ್ನು ತಯಾರು ಮಾಡಬಹುದೆಂದು ಹೇಳುತ್ತಾರೆ. ಈಗಾಗಲೇ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಈ ಬಗ್ಗೆ ಕೆಲಸವು ಪ್ರಾರಂಭವಾಗಿದೆಯೆಂದು ಕೇಳಿರುತ್ತೇನೆ. ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ, ವಿದ್ಯಾರ್ಥಿಗಳು, ಇಂಟರ್‌ಮೀಡಿಯೆಟ್, ಬಿ.ಎ., ಬಿ.ಎಸ್‌ಸಿ., ಬಿ.ಕಾಂ. ಪರೀಕ್ಷೆಗಳಲ್ಲಿ ಉತ್ತರಗಳನ್ನು ಬರೆಯುವಾಗ, ಇಂಗ್ಲೀಷಿನಲ್ಲಾಗಲೀ ಅಥವಾ ಬಂಗಾಳಿ ಭಾಷೆಯಲ್ಲಾಗಲಿ ಬರೆದುಕೊಡಬಹುದೆಂದು ಮಾಡಿದ್ದಾರೆ. ನಾಗಪುರದ ವಿಶ್ವವಿದ್ಯಾನಿಲಯದಲ್ಲಿ 1949 ರಿಂದ ಹಿಂದಿ, ಮರಾಠಿ, ಉರ್ದು ಈ ಭಾಷೆಗಳಲ್ಲಿ ಶಿಕ್ಷಣ ಮತ್ತು ಪರೀಕ್ಷೆಗಳು ಮಾಧ್ಯಮವಾಗಿ ಅಂಗೀಕರಿಸಿದ್ದಾರೆ. ಬೆನಾರಿಸ್ ವಿಶ್ವವಿದ್ಯಾನಿಯದಲ್ಲಿ ಇಂಟರ್‌ಮೀಡಿಯೆಟ್ ತರಗತಿಯ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತರವನ್ನು ಇಂಗ್ಲೀಷಿನಲ್ಲಾಗಲಿ ಅಥವಾ ಹಿಂದಿಯಲ್ಲಾಗಲಿ ಬರೆಯಬಹುದೆಂದು ಏರ್ಪಡಿಸಿರುತ್ತಾರೆ. ಅಲ್ಲದೆ 1950ರಿಂದ ಹಿಂದೆಯೇ ಪೂರ್ತಿಯಾಗಿ ಶಿಕ್ಷಣ ಮಾಧ್ಯಮವಾಗುವಂತೆ ತಿಳಿಸಿರುತ್ತಾರೆ. ಈ ರೀತಿ ಅನೇಕ ಕಡೆಗಳಲ್ಲಿ ಆಯಾಯ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನಡೆಯಬೇಕೆಂಬುದನ್ನು ಅಂಗೀಕರಿಸಿರುತ್ತಾರೆ. ಆದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಈ ಬಗ್ಗೆ ಇದುವರೆಗೂ ಯಾವ ಕಾರ್ಯಕ್ರಮಗಳನ್ನೂ ಕೈಗೊಂಡಂತೆ ಕಾಣುತ್ತಿಲ್ಲ. ನಮ್ಮಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತರುವುದಾದರೆ ಎಲ್ಲ ಪಠ್ಯ ಪುಸ್ತಕಗಳನ್ನು ಕನ್ನಡದಲ್ಲಿ ತಯಾರಿಸಲು ತಕ್ಕ ವಿದ್ವಾಂಸರಿರುತ್ತಾರೆ. ಈ ಬಗ್ಗೆ ನಮ್ಮ ಸರ್ಕಾರದವರು ಅವಶ್ಯಕವಾದ ಹಣವನ್ನು ಒದಗಿಸಿ ಪ್ರೋತ್ಸಾಹಿಸಬೇಕೆಂದು ಪ್ರಾರ್ಥಿಸಿ, ಈ ನಿರ್ಣಯವನ್ನು ಅನುಮೋದಿಸುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಧ್ಯಕ್ಷರೇ, ಇದು ಒಂದು ದೊಡ್ಡ ಸಮಸ್ಯೆ. ಇದರ ವಿಚಾರದಲ್ಲಿ ಸಾಧಾರಣವಾಗಿ ನಮ್ಮ ದೇಶದವರತಕ್ಕ ವರಿಗೆಲ್ಲ ಬಹಳ ಆಕಾಂಕ್ಷೆ ಇದೆ. ಈಗ ತಾನೆ ಮಾತನಾಡಿದ ಮಾನ್ಯ ಚಂದ್ರಶೇಖರಯ್ಯನವರು ಹೇಳಿದ ಹಾಗೆ All India Education Ministers Conferenceನಲ್ಲಿ ಆದ ಒಂದು ತೀರ್ಮಾನ ಮತ್ತು ಹಾಗೆ ಅವರು ಮಾಡಿರತಕ್ಕ ಶಿಫಾರಸ್ಸುಗಳ ಒಂದು ವರದಿಯನ್ನು ನಮಗೂ ಕಳುಹಿಸಿ ಕೊಟ್ಟಿದ್ದಾರೆ. ಈ ಬಗ್ಗೆ ನಾನಾ ವಿಷಯಗಳನ್ನು ಅವರು ಚರ್ಚೆ ಮಾಡಿ, ಎಲ್ಲರನ್ನೂ ಪರಿಶೀಲಿಸಿ ಆ ವರದಿಯನ್ನು ಕಳುಹಿಸಿದ್ದಾರೆ. ಅದೇ ರೀತಿ ಕರ್ನಾಟಕದವರೂ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೂ ಅನೇಕ ವಿಷಯಗಳನ್ನು ಪರಿಶೀಲನೆ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಇರಾಖಾ ಅಧಿಕಾರಿಗಳೂ ಸಹ ಅನೇಕ ವಿಷಯಗಳನ್ನು ಪರಿಶೀಲಿಸಿ ಅದೇ ರೀತಿಯಾಗಿ ಒಂದು ವರದಿಯನ್ನು ಕಳುಹಿಸಿದ್ದಾರೆ.

ಇದರ ಜೊತೆಗೆ ಬೊಂಬಾಯಿ ಸರ್ಕಾರದವರು ಇತ್ತೀಚೆಗೆ ಶಿಕ್ಷಣದ ಮಾಧ್ಯಮ ಯಾವ್ಯಾವ ಸ್ಟೇಜಿನಲ್ಲಿ ಹೇಗಿರಬೇಕೆಂದು ತೀರ್ಮಾನ ಮಾಡಿದ್ದಾರೆ. ಪ್ರೈಮರಿ ಸ್ಕೂಲು, ಮಿಡ್ಲ್ ಸ್ಕೂಲುಗಳಲ್ಲಿ ಯಾವ ಭಾಷೆಯು ಮೊದಲು ಪ್ರಾಶಸ್ತ್ಯ ಪಡೆಯಬೇಕು, ಎಂಡನೆಯ ಮತ್ತು ಮೂರನೆಯ ಸ್ಥಾನಗಳು ಯಾವ ಭಾಷೆಗಿರಬೇಕು ಎಂಬುದನ್ನು ಕೂಡ ಪರಿಶೀಲಿಸಿದ್ದಾರೆ. ಮದ್ರಾಸಿನಲ್ಲಿ ಇದೇ ರೀತಿ ಮಾಡಿದ್ದಾರೆ. ಇವೆಲ್ಲಾ ವಿಚಾರಗಳನ್ನೂ ಒಳಗೊಂಡಿರುವ ಒಂದು ನೋಟ್ ತಯಾರಾಗಿದೆ. ಅದನ್ನು ಸರ್ಕಾರದ ಪರಿಶೀಲನೆಗೆ ಕಳುಹಿಸಿದ್ದಾರೆ. ಈಗಾಗಲೇ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ಹಾಗೆ ಕನ್ನಡ ಭಾಷೆಯಿದೆ. ಹೈಸ್ಕೂಲುಗಳಲ್ಲಿ ನಿರ್ಬಂಧವಾಗಿ ಹಿಂದಿ ಭಾಷೆಯನ್ನು ಜಾರಿಗೆ ತಂದಿದೆ. ವಿಶ್ವವಿದ್ಯಾನಿಲಯದಲ್ಲೂ ಈ ತರಹ ಕನ್ನಡ ಭಾಷೆಯನ್ನು ಜಾರಿಗೆ ತರಬೇಕೆಂಬ ಅಂಶದ ವಿಚಾರವನ್ನು ಮೊದಲೇ ಹೇಳಿದ ಹಾಗೆ ಒಂದು ಸಮಿತಿಯು ಪರಿಶೀಲಿಸಿ ಅಭಿಪ್ರಾಯವನ್ನು ಕಳುಹಿಸಿದೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಲಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಎಷ್ಟು ವರ್ಷದಲ್ಲಿ ಪರಿಶೀಲನೆಯಾಗುತ್ತದೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಷ್ಟು ಸುಲಭವಾಗಿ ಈ ವಿಚಾರದಲ್ಲಿ ಅಭಿಪ್ರಾಯ ಸೂಚಿಸಲು ಸಾಧ್ಯವಿಲ್ಲ.

Sri A. BHEEMAPPA NAIK.—In High School Hindi is not a compulsory examination subject. It is a non-examination subject.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಿಂದಿ ಪರೀಕ್ಷೆಯ ವಿಷಯ ಎಂದು ಹೇಳಲಲ್ಲ. ಒತ್ತಾಯವಾಗಿ ಜಾರಿಗೆ ತಂದಿದೆಯೆಂದು ಹೇಳಿದೆ. ಇನ್ನು ಇಂಗ್ಲಿಷನ್ನು ಸಂಪೂರ್ಣವಾಗಿ ಬದರಾಯಿಸಿ ತರ್ಜುಮೆ ಮಾಡುವುದಕ್ಕೆ ಅದು ಎಷ್ಟು ಸುಲಭವಾಗಿದೆಯೆ ಎಂಬ ಅಂಶವನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಉದಾಹರಣೆಗೆ ಈ ನಿರ್ಣಯವನ್ನು ಕಳುಹಿಸಿರುವ ಮಹನೀಯರು ಮೊನ್ನೆ ರಾ ಪರೀಕ್ಷೆಗೆ ಕುಳಿತಿದ್ದರು. ಅದು

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು).

ಇಂಗ್ಲೀಷಿನಲ್ಲೇ ನಡೆಯಬೇಕಾಗಿತ್ತು. ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸ ತೆಗೆದು ಲಾ ಪರೀಕ್ಷೆಗೆ ಬೇಕಾದ್ದನ್ನು ತರ್ಜುಮೆ ಮಾಡುವುದೆಂದರೆ ಬಹು ಕಷ್ಟ, ಮತ್ತು ಸೈನ್ಸ್ ಇರಾಖೆಯಲ್ಲಿ ಪ್ರಯೋಗ ಮಾಡುವ ವಿಷಯವನ್ನು ತರ್ಜುಮೆ ಮಾಡಿ ಪಾಠ ಹೇಳುವುದು ಕಷ್ಟ. ಎಲ್ಲವನ್ನೂ ತಿಳಿದ ಪ್ರವೀಣರಿಗೂ ಸಹ ಸೈನ್ಸ್ ವಿಚಾರವು ಎಲ್ಲರಿಗೂ ತಿಳಿಯುವಂತೆ ಕನ್ನಡದಲ್ಲಿ ಶಿಕ್ಷಣ ಕೊಡಲು ಕಷ್ಟವಾಗಬಹುದು. ಆದರೂ ಅದನ್ನು ನೂಕ್ತರೀತಿಯಲ್ಲಿ ಮಾತತಕ್ಕ ಅವಶ್ಯಕತೆಯಿದೆ. ಕನ್ನಡಕ್ಕೆ ಹೆಚ್ಚಿನ ಪ್ರಾತನ್ಯ ಕೊಡಬೇಕು, ಅವಕಾಶ ಕಲ್ಪಿಸಿಕೊಡಬೇಕು ಎಂಬುದರಲ್ಲಿ ಸರ್ಕಾರಕ್ಕೂ ಮಾನ್ಯ ಸದಸ್ಯರಿಗೂ ಭಿನ್ನಾಭಿಪ್ರಾಯವಿಲ್ಲ. ಎಲ್ಲರ ಅಭಿಪ್ರಾಯವನ್ನೂ ಒಳಗೊಂಡಿರುವಂತೆ ಈಗ ಮಾಡಿರುವ ನೋಟನ್ನು ಸರ್ಕಾರದವರು ಬಹಳ ತೀವ್ರತೆಯಿಂದ ಪರಿಶೀಲಿಸುತ್ತಿದ್ದಾರೆ. ಆದಷ್ಟು ಬೇಗ ಈ ಬಗ್ಗೆ ಒಂದು ತೀರ್ಮಾನಕ್ಕೆ ಬರಲು ಪ್ರಯತ್ನಮಾಡುತ್ತಾರೆ. ಅಲ್ಲದೆ ಇದರ ಜೊತೆಗೆ ಶ್ರೀ ಸಿ. ಆರ್. ರೆಡ್ಡಿಯವರು ಒಪ್ಪಿಸಿರುವ ವರದಿಯ ಆಧಾರದ ಮೇಲೆ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಬಿಲ್ಲು ಮುಂದಿನ ಅಧಿವೇಶನದಲ್ಲಿ ಸಭೆಯ ಮುಂದೆ ಬರುತ್ತದೆ. ಆಗ ಅದರಲ್ಲಿರುವ ವಿಚಾರದಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯಪಡೆದು ಬದಲಾವಣೆಯೇನಾದರೂ ಆಗಬೇಕಾಗಿದ್ದರೆ ನೋಡಿ ಪರಿಶೀಲಿಸಿ ಸರ್ಕಾರದವರು ಖಂಡಿತ ಆದಷ್ಟು ಬೇಗ ತಕ್ಕ ಪ್ರಯತ್ನ ಮಾಡುತ್ತಾರೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ ಎಂದು ಭರವಸೆ ಕೊಡುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮುಂದೆ ಕನ್ನಡವನ್ನು ಮಾಧ್ಯಮವಾಗಿ ಮಾಡುತ್ತೀರಾ ?

The Hon'ble Sri H. C. DASAPPA.—Though we provide such a large grant to the University it enjoys in academical matters a large measure of autonomy. It would be unfair to ask the Government when we are not in full possession of all the facts as to when we can do it and within what time and so on.

ಶ್ರೀ ಡಿ. ಎಂ. ಸಿದ್ದಯ್ಯನವರು.— ಖಚಿತವಾಗಿ ಅಭಿಪ್ರಾಯವನ್ನು ತಿಳಿಸಿದರೆ ಉತ್ತಮ.

The Hon'ble Sri R. CHENNIGARAMIAH.—Government are prepared to provide necessary facilities.

ಶ್ರೀ ಡಿ. ಎಂ. ಸಿದ್ದಯ್ಯನವರು.—ವಿಶ್ವವಿದ್ಯಾನಿಲಯಕ್ಕೆ ಅಧಿಕಾರ ಕೊಟ್ಟಿದೆಯೆಂದು ಹೇಳುತ್ತೀರಿ. ಮತ್ತು ಸಮಿತಿಯವರು ನಿರ್ಣಯಮಾಡಿ ಕಳುಹಿಸಿದ್ದಾರೆ. ಅದ್ದರಿಂದ ತಕ್ಷಣ ಜಾರಿಗೆ ತರುತ್ತೇವೆಂದು ಭರವಸೆ ಕೊಟ್ಟರೆ ನಿರ್ಣಯ ವಾಪಸು ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಅಕೆಡೆಮಿಕ್ ಕೌನ್ಸಿಲ್ ತೀರ್ಮಾನ ನೋಡಿ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಸರ್ಕಾರದಲ್ಲಿ ನಂಬಿಕೆಯಿಟ್ಟು ಜಾಗ್ರತೆ ಕನ್ನಡ ಮಾಧ್ಯಮವನ್ನು ಜಾರಿಗೆ ತರುತ್ತಾರೆಂಬ ಭರವಸೆ ಮೇಲೆ ನನ್ನ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತೇನೆ.

The resolution was, by leave of the House, withdrawn.

Presentation of Select Committee Reports.

The Hon'ble Sri H. C. DASAPPA (Minister for Finance and Industries).—Sir, I seek permission to present the report of the Select Committee on the Mysore Health Cess Bill, 1951, copies of which I believe are distributed or are in the process of distribution.

I also present the report of the Select Committee on the Mysore Cinematograph Entertainment Bill, 1951, copies of which are getting ready and will be distributed in a couple of hours.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).— ಈ ಬಿಲ್ಲುಗಳ ಮೇಲೆ ತಿದ್ದುಪಡಿಯನ್ನು ಸೂಚಿಸುವವರು ನಾಳೆ 10 ಗಂಟೆಯೊಳಗೆ ಅದನ್ನು ಕೊಡಬೇಕು. ಆದರೆ ಚರ್ಚೆ 5ನೆಯ ತಾರೀಖು ಮಾಡಲಾಗುತ್ತದೆ.

ಶ್ರೀ ಎಂ. ಮಾದಯ್ಯನವರು.— ನಾಳೆ ಏನು ತೆಗೆದು ಕೊಳ್ಳುತ್ತೀರಿ?

Mr. SPEAKER.—The list of business also will be distributed to Hon'ble Members.

The House is adjourned till to-morrow morning 8 o'clock.

The Assembly adjourned at Fifty Minutes past Twleve of the Clock to meet again on Wednesday the 4th April 1951 at Eight of the Clock.

WD 3189 —GPB—500—13-6-51